ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಹೊನ್ನಾವರ.

ಸಿಸಿ ನಂಃ 894/2020
ಪಿ ಡಬ್ಲುಃ 03.
ಸಿ ಡಬ್ಲುಃ 01.

| | |
|---|---|
| ಸಾಕ್ಷಿದಾರರ ಹೆಸರು | ಗಣಪತಿ ಶೇರುಗಾರ |
| ತಂದೆಯ ಹೆಸರು | ರಾಮು |
| ವಯಸ್ಸು | 51 |
| ಉದ್ಯೋಗ | ಪಿ.ಎಸ್.ಐ. ಬೀರೂರು ಪೋಲಿಸ್ ಠಾಣೆ |
| ವಾಸ್ತವ್ಯ | ಬೀರೂರು. |

ಸಾಕ್ಷಿಯನ್ನು ದಿನಾಂಕಃ 24.11.2025 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನಾನು 2015 ರಿಂದ 2020 ರವರೆಗೆ ಸಿದ್ದಾಪುರ ಪೋಲಿಸ್ ಠಾಣೆಯಲ್ಲಿ ಎ. ಎಸ್. ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 06.12.2017 ರಂದು ಬೆಳಿಗ್ಗೆ 9.00 ಗಂಟೆಯ ಸುಮಾರಿಗೆ ನಾನು ಹೈವೇ ಪೆಟ್ರೋಲಿಂಗ್ ವಾಹನದಲ್ಲಿ ಕರ್ತವ್ಯದ ಮೇಲಿದ್ದಾಗ ಅದರ ಚಾಲಕನಾಗಿ ಚಾಸಾ 15 ರವರು ವಾಹನವನ್ನು ಚಲಾಯಿಸುತ್ತಿದ್ದರು. ಆ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕುಮಟಾ ತಾಲೂಕಿಗೆ ಭೇಟಿ ನೀಡುವ ಸಂದರ್ಭವಿದ್ದು, ಬಂದೊಬಸ್ತ ಕರ್ತ್ಯವದ ಮೇಲೆ ನಾನೂ ಸಹ ಕುಮಟಾದಲ್ಲಿ ಇದ್ದೆನು. ಆನಂತರ ಕರ್ತ್ಯವ್ಯವನ್ನು ಮುಗಿಸಿ ರಾತ್ರಿ 9.00 ಗಂಟೆಯ ಸುಮಾರಿಗೆ ಚಾಸಾ 33 ರವರು ನನಗೆ ಹೊನ್ನಾವರಕ್ಕೆ ಹೋಗಿ ವರದಿ ಮಾಡುವಂತೆ ತಿಳಿಸಿದರು. ಅದರಂತೆ ನಾನು ರಾತ್ರಿ 9.30 ರ ಸುಮಾರಿಗೆ ಹೊನ್ನಾವರದ ಪೋಲಿಸ ಠಾಣೆಗೆ ಬಂದು ವರದಿ ಮಾಡಿಕೊಂಡೆನು. ತದನಂತರ ಸದ್ರಿ ಠಾಣೆಯಲ್ಲಿದ್ದ ಠಾಣಾಧಿಕಾರಿಯವರು ಚಾಸಾ 11 ಮತ್ತು 12 ರವರು ಹೊನ್ನಾವರದ ಗುಡ್ ಲಕ್ ಹೋಟೆಲ್ ಹತ್ತಿರ ಗಲಾಟೆ ನಡೆಯುತ್ತಿದ್ದು ಅವರು ಅಲ್ಲಿಗೆ ಹೋಗಿದ್ದಾರೆ, ನೀವೂ ಸಹ ಅಲ್ಲಿಗೆ ಹೋಗಿ ಎಂದು ತಿಳಿಸಿದರು. ನಾನು ಅದರಂತೆ ಗುಡ್ ಲಕ್ ಹೋಟೆಲ್ ಹತ್ತಿರ ಹೋದಾಗ ಸದ್ರಿ ಸ್ಥಳದಲ್ಲಿ ಸುಮಾರು 70-80 ಜನ ಮುಸ್ಲಿಂಮರು ಅಕ್ರಮ ಕೂಟ ಕಟ್ಟಿಕೊಂಡು

ಕೈಯ್ಯಲ್ಲಿ ಕಬ್ಬಿಣದ ರಾಡ್, ಕಟ್ಟಿಗೆ ಬಡಿಗೆ ಹಾಗೂ ಸೋಡಾ ಬಾಟಲಿ ಮತ್ತು ಕಲ್ಲುಗಳನ್ನು ಹಿಡಿದುಕೊಂಡು ನಾರೆ ಎಂದು ಘೋಷಣೆ ಕೂಗುತ್ತಾ ಹಿಂದೂಗಳನ್ನು ಬಿಡಬೇಡಿ ಬುದ್ಧಿ ಕಲಿಸುವಾ ಎಂದು ಹೇಳುತ್ತಿದ್ದರು. ನಂತರ ದುರ್ಗಾಕೇರಿಯ ದೇವಸ್ಥಾನ ಕಡೆಯಿಂದ 70-80 ಜನ ಹಿಂದೂಗಳು ಕೈಯ್ಯಲ್ಲಿ ಕಬ್ಬಿಣದ ರಾಡ್, ಕಟ್ಟಿಗೆ ಬಡಿಗೆ, ಸೋಡಾ ಬಾಟಲಿ ಹಾಗೂ ಕಲ್ಲುಗಳನ್ನು ಹಿಡಿದುಕೊಂಡು ಜೈ ಶ್ರೀರಾಮ ಎಂದು ಘೋಷಣೆ ಕೂಗುತ್ತಾ ಸಾಬರನ್ನು ಬಿಡಬೇಡಿ ಇವತ್ತು ಬುದ್ದಿ ಕಲಿಸುವಾ ಎಂದು ಹೇಳುತ್ತಾ ಬಂದರು. ನಂತರ ಎರಡೂ ಕೋಮಿನ ನಡುವೆ ಮಾತಿನ ಚಕಮಕಿ ಉಂಟಾಯಿತು. ಆಗ ನಾವು ಸದ್ರಿ ಅಕ್ರಮ ಕೂಟವನ್ನು ತಡೆದು ವಾತಾವರಣವನ್ನು ತಿಳಿಗೊಳಿಸಲು ಹೋದಾಗ ಎರಡೂ ಕೋಮಿನವರು ತಮ್ಮ ತಮ್ಮ ನಡುವೆ ಸೋಡಾ ಬಾಟಲಿ ಹಾಗೂ ಕಲ್ಲುಗಳನ್ನು ತೂರಿಕೊಂಡರು. ನಂತರ ನಾವು ಅಕ್ರಮ ಕೂಟವನ್ನು ತಡೆಯಲು ಸಲಹೆ ಸೂಚನೆಗಳನ್ನು ಕೊಟ್ಟರೂ ಸಹ ಇಬ್ಬರೂ ಕೋಮಿನವರು ತಮ್ಮ ವಾಗ್ವಾದವನ್ನು ಮುಂದುವರಿಸಿದರು. ತದನಂತರ ಎರಡೂ ಕೋಮಿನವರು ಕರ್ತವ್ಯದ್ದ ಮೇಲಿದ್ದ ನಮಗೆ ಅವಾಚ್ಯವಾಗಿ ಬೈದು ನಮ್ಮ ಕರ್ತವ್ಯಕ್ಕೆ ಅಡ್ಡಿ ಆತಂಕವನ್ನು ಉಂಟುಮಾಡಿದರು. ನಂತರ ಎರಡೂ ಕೋಮಿನಲ್ಲಿದ್ದಂತಹ ಕೆಲವು ಕಿಡಿಕೇಡಿಗಳು ಪಕ್ಕದಲ್ಲಿದ್ದಂತಹ ಅಂಗಡಿಗಳ ಮೇಲೆ ಸೋಡಾ ಬಾಟಲಿ ಮತ್ತು ಕಲ್ಲನ್ನು ಎಸೆದರು.

ಸದ್ರಿ ಕೃತ್ಯವನ್ನು ತಪ್ಪಿಸಲು ನಾವು ಹೋದಾಗ ಗುಂಪಿನಲ್ಲಿದ್ದ ಒಬ್ಬ ವ್ಯಕ್ತಿಯು ನನಗೆ ಕಲ್ಲಿನಿಂದ ಹೊಡೆದನು, ಸದ್ರಿ ಕಲ್ಲು ನನ್ನ ಬೆನ್ನಿಗೆ ಬಿದ್ದಿದ್ದು ಅದರಿಂದ ನನಗೆ ಸಾದಾ ಸ್ವರೂಪದ ಗಾಯ ಉಂಟಾಯಿತು. ತದನಂತರ ಗುಂಪಿನಲ್ಲಿದ್ದ ಇನ್ನೊಬ್ಬ ವ್ಯಕ್ತಿಯು ನಮ್ಮ ಹೈವೇ ಪೆಟ್ರೋಲಿಂಗ್ ವಾಹನದ ಮೇಲೆ ಕಲ್ಲನ್ನು ಎಸೆದು ನಮ್ಮ ವಾಹನದ ಮುಂಬದಿ ಹಾಗೂ ಹಿಂಬದಿ ಜಖಂಗೊಳಿಸಿರುತ್ತಾರೆ. ಸದ್ರಿ ನಮ್ಮ ವಾಹನ ಜಖಂನಿಂದ ಅಂದಾಜು ರೂ. 30,000/- ಹಾನಿಯುಂಟಾಗಿರುತ್ತದೆ.

ಈ ಘಟನೆಯ ವೇಳೆ ಅಲ್ಲಿದ್ದಂತಹ ಪೋಲಿಸ್ ಸಿಬ್ಬಂದಿಗಳಿಗೆ ಹಾಗೂ ಪೋಲಿಸ್ ವಾಹನಗಳಿಗೆ ಮತ್ತು ಖಾಸಗಿ ವಾಹನಗಳಿಗೆ ಖಜಂ ಆಗಿ ಹಾನಿಯುಂಟಾಗಿರುತ್ತದೆ. ಅದರಂತೆ ಸದ್ರಿ ಸ್ಥಳದ ಪಕ್ಕದಲ್ಲಿದ್ದಂತಹ ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೂ ಸಹ ಹಾನಿಯುಂಟಾಗಿರುತ್ತದೆ. ಆನಂತರ ನಾನು ಚಾಸಾ 12 ರವರಿಗೆ ವಿಚಾರಿಸಲಾಗಿ ಸದ್ರಿ ಕೃತ್ಯವು 9.00 ಗಂಟೆಯ ಸುಮಾರಿಗೆ ಪಾರಂಭವಾಗಿದ್ದು, ಸದ್ರಿ ಘಟನೆಯು ಹಿಂದೂ ಕೋಮಿನ ಗಿರೀಶ ಮೇಸ್ತ ರವರ ಆಟೋ ಹಾಗೂ ಮುಸ್ಲಿಂ ಕೋಮಿನ ರಫಿಕ ಕಾಸರಕೋಡ ರವರ ಬೈಕ್ ನಡುವೆ ಅಪಘಾತ ಉಂಟಾಗಿದ್ದರಿಂದ ನಡೆದಿರುವುದಾಗಿ ನನಗೆ ತಿಳಿಸಿದರು. ಆನಂತರ ನನಗೆ ಕಲ್ಲನ್ನು ಎಸೆದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಆ ವ್ಯಕ್ತಿಯ ಹೆಸರು ಮಹಮ್ಮದ್ ಶರೀಫ್ ಅಬ್ದುಲ್ ರಜಾಕ್ ಶೇಖ್ ಆಗಿರುವುದು ತಿಳಿದು ಬಂದಿತು. ಆನಂತರ ಇನ್ನುಳಿದ ಆರೋಪಿತರ ಹೆಸರು ಮತ್ತು ವಿಳಾಸವನ್ನು ತಿಳಿದುಕೊಂಡು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡೆನು. ತದನಂತರ ಮಾರನೇ ದಿನ ಬೆಳಗಿನ ಜಾವ 8.15ರ ಸುಮಾರಿಗೆ ಠಾಣೆಗೆ ಹೋಗಿ ಚಾಸಾ 43 ರವರ ಮುಂದೆ ದೂರನ್ನು ನೀಡಿರುತ್ತೇನೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿ.ಪಿ. 2 ಎಂದು ಹಾಗೂ ಅದರಲ್ಲಿರುವ ಅವರ ಸಹಿಯನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು.

ಮಾರನೇ ದಿನ ಘಟನಾ ಸ್ಥಳವಾದ ಗುಡ್‌ಲಕ್ ಹೋಟೆಲ್ ಹತ್ತಿರ ಚಾಸಾ 2 ಮತ್ತು 3 ರವರ ಸಮಕ್ಷಮದಲ್ಲಿ ನಾನು ತೋರಿಸಿದ ಸ್ಥಳವನ್ನು ವಿವರವಾಗಿ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿಯು ನಿ.ಪಿ. 1ರ ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ. ಸದ್ರಿ ನಿ.ಪಿ. 1ರ ಪಂಚನಾಮೆಯನ್ನು 11.30 ರಿಂದ 1.30ರ ಅವಧಿಯಲ್ಲಿ ಮಾಡಲಾಗಿರುತ್ತದೆ. ಸದ್ರಿ ಪಂಚನಾಮೆಯ ಕಾಲಕ್ಕೆ ನಾನು ಜಖಂ ಆದಂತರ ವಾಹನಗಳನ್ನು ಹಾಗೂ ಸಾರ್ವಜನಿಕ ಆಸ್ತಿಯನ್ನು ಪೋಲಿಸರಿಗೆ ತೋರಿಸಿರುತ್ತೇನೆ. ಪೋಲಿಸರು ಸದ್ರಿ ಸ್ಥಳದಲ್ಲಿ 10 ಕಲ್ಲುಗಳು, 5 ಬಾಟಲಿ, 5 ಕಬ್ಬಿಣದ ರಾಡ್, 10 ಕಟ್ಟಿಗೆಯ ಬಡಿಗೆ ಹಾಗೂ 6 ಬೈಕ್‌ಗಳನ್ನು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಸದ್ರಿ 10 ಕಲ್ಲುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಒಟ್ಟುಗೂಡಿಸಿ ಮುದ್ದೆಮಾಲು -1 ಎಂದು, 5 ಬಾಟಲಿಗಳನ್ನು ಒಟ್ಟುಗೂಡಿಸಿ ಮುದ್ದೆಮಾಲು -2 ಎಂದು, 5 ಕಬ್ಬಿಣದ ರಾಡ್‌ಗಳನ್ನು ಒಟ್ಟುಗೂಡಿಸಿ ಮುದ್ದೆಮಾಲು-3 ಎಂದು, 10 ಕಟ್ಟಿಗೆಯ ಬಡಿಗೆಗಳನ್ನು ಒಟ್ಟುಗೂಡಿಸಿ ಮುದ್ದೆಮಾಲು -4 ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯ ಕಾಲಕ್ಕೆ ತೆಗೆದ 3 ಫೋಟೋಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿ.ಪಿ. 3 ರಿಂದ 5 ಎಂದು ಗುರುತಿಸಲಾಯಿತು. ಆನಂತರ ನಾನು ಪುನಃ ಪೋಲಿಸ್ ಠಾಣೆಗೆ ಹೋಗಿ ನನ್ನ ಮರುಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ಮಾನ್ಯ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲುಃ ಎ ಪಿ ಪಿ ಯವರಿಂದಃ**

ಆ ದಿನ ಮುಸ್ಲಿಂ ಕೋಮಿನವರು ಅಕ್ರಮ ಕೂಟ ಕಟ್ಟಿಕೊಂಡು " ನಾರೇ ತಕ್ವೀರ್ ಅಲ್ಲಾಹೋ ಅಕ್ಬರ್ " ಎಂದು ಕೂಗುತ್ತಾ ಹಿಂದೂಗಳನ್ನು ಬಿಡಬೇಡಿ ಎಂದು ಹೇಳಿದ್ದರು ಎಂದರೆ ಸರಿ.

**ಪಾಟೀ ಸವಾಲುಃಶ್ರೀ ವಿ.ಆರ್.ಎನ್. ವಕೀಲರಿಂದಃ**

ಆ ದಿನ ನಾನು ಕುಮಟಾ ಬಂದೋಬಸ್ತಗೆ ಬಂದಿದ್ದೆನು. ನಾನು ಆ ದಿನ ಹೊನ್ನಾವರಕ್ಕೆ ಬಂದು ವರದಿ ಮಾಡಿಕೊಂಡ ಬಗ್ಗೆ ಡೈರಿಯಲ್ಲಿ ನಮೂದಾಗಿರುತ್ತದೆ. ಆ ದಿನ ಚಾಸಾ 43 ರವರು ಠಾಣಾಧಿಕಾರಿಯಾಗಿದ್ದರು. ನಾನು ಮೊದಲು ಘಟನಾ ಸ್ಥಳಕ್ಕೆ ಹೋದೆನು, ಆನಂತರ ಚಾಸಾ 43 ರವರು ಬಂದರು.

ನಾನು ಘಟನಾ ಸ್ಥಳಕ್ಕೆ ಹೋಗಿ ನೋಡಿದಾಗ ಎರಡೂ ಕೋಮಿನವರು ಅಕ್ರಮ ಕೂಟ ಕಟ್ಟಿಕೊಂಡಿದ್ದರು ಹಾಗೂ ಇನ್ನೂ ಜನರು ಬಂದು ಅಲ್ಲಿಗೆ ಸೇರುತ್ತಿದ್ದರು. ಸದ್ರಿ ನಮ್ಮ ಹೈವೇ ಪೆಟ್ರೋಲಿಂಗ್ ವಾಹನದಲ್ಲಿ ಕ್ಯಾಮೆರಾ ಅಳವಡಿಸಲಾಗಿದೆ. ಸದ್ರಿ ಕ್ಯಾಮೆರಾದಲ್ಲಿ ಘಟನೆಯ ಕುರಿತಾಗಿ ಸೆರೆಯಾಗಿರುತ್ತದೆ. ಸದ್ರಿ ಕ್ಯಾಮೆರಾದಲ್ಲಿ ಅಳವಡಿಕೆಯಾದ ರೆಕಾರ್ಡಿಂಗ್ ಪಿ.ಎಸ್.ಐ. ರವರು ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ರೆಕಾರ್ಡ್ ಆಗಿರುತ್ತದೆ.

ನಮ್ಮ ಸಿಬ್ಬಂದಿಗಳು ಗಲಾಟೆ ಮಾಡಬಾರದು ಎಂಬುದಾಗಿ ಎರಡೂ ಕೋಮಿನವರನ್ನು ಶಾಂತಗೊಳಿಸುತ್ತಿದ್ದರು. ಎರಡೂ ಕೋಮಿನವರ ನಡುವೆ ಅಂದಾಜು 1 ಮಾರು ಅಂತರವಿರಬಹುದು. ನಾನು ಹೋಗುವ ಮೊದಲೇ ಜನರು ಸೇರಿದ್ದರು, ನಂತರ ಗಲಾಟೆ ನಡೆದಿದೆ ಮತ್ತು ಆರೋಪಿತರು ಹೇಳಿಕೆ ನೀಡಿದ್ದಾರೆ. ನಾವು ಆ ದಿನ ಮಧ್ಯದಲ್ಲಿ ನಿಂತುಕೊಂಡು ಎರಡೂ ಗುಂಪಿನವರಿಗೆ ಚದುರಿಸುತ್ತಾ ಇದ್ದೆವು. ಆ ದಿನ ಸ್ಥಳದಲ್ಲಿ ಅಂದಾಜು 30-35 ಜನ ಸಿಬ್ಬಂದಿಗಳು ಇದ್ದಿರಬಹುದು. ನನ್ನ ಹಿಂದಿನಿಂದ ಅಂದರೆ ಅಂದಾಜು 15-20 ಫೂಟ್ ದೂರದಿಂದ ಬಂದು ಕಲ್ಲು ನನಗೆ ಬಿದ್ದಿತ್ತು. ಕಲ್ಲು ಹೊಡೆದ ವ್ಯಕ್ತಿಯನ್ನು ನಾನು ನೋಡಿದ್ದೇನೆ ಹಾಗೂ ಗಣೇಶ ನಾಯ್ಕರವರು ನೋಡಿದ್ದಾರೆ. ಕಲ್ಲು ಎಸೆದ ವ್ಯಕ್ತಿಯ ಮುಂದೆ ಸುಮಾರು ಜನ ಇದ್ದರು.

ಕಲ್ಲು ಹೊಡೆದ ವ್ಯಕ್ತಿಯನ್ನು ನನ್ನ ಮುಂದೆ ತನಿಖೆಯ ಕಾಲಕ್ಕೆ ನನ್ನ ಮುಂದೆ ತೋರಿಸಿದ್ದಾರೆ, ಆದರೆ ಅದು ಯಾವ ದಿನಾಂಕ ಎಂಬುದು ನನಗೆ ಗೊತ್ತಿಲ್ಲ. ಆದರೆ ದೂರನ್ನು ನೀಡಿದ 4-5 ದಿನಗಳ ತರುವಾಯ ತೋರಿಸಿದ್ದಾರೆ. ಆದರೆ ಪರೇಡ್ ಮಾಡಿರುವುದಿಲ್ಲ. ದಿನಾಂಕಃ 07.12.2017 ರಂದು ಎಷ್ಟು ಜನರಿಗೆ ಅರೆಸ್ಟ ಮಾಡಿದ್ದಾರೆ ಎಂಬುದು ನನಗೆ ಮಾಹಿತಿ ಇಲ್ಲ.

ನನಗೆ ಕಲ್ಲು ಬಿದ್ದ ತಕ್ಷಣ 10-15 ನಿಮಿಷದಲ್ಲಿ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿದ್ದೇನೆ. ನಾನು ವೈದ್ಯಾಧಿಕಾರಿಯವರಿಗೆ ಘಟನೆಯ ಬಗ್ಗೆ ಹೇಳಿದ್ದೇನೆ ಹಾಗೂ ವೈದ್ಯಾಧಿಕಾರಿಗಳು MLC ಯನ್ನು ನನಗೆ ಕೊಟ್ಟು ಕಳುಹಿಸಿದ್ದಾರೆ. ನನಗೆ ಆ ದಿನ 10.30 ಗಂಟೆಗೆ ಚಿಕಿತ್ಸೆಯನ್ನು ನೀಡಿರಬಹುದು. ಆನಂತರ ನಾನು ಠಾಣೆಗೆ ಹೋಗಿ MLC ಯನ್ನು ಕೊಟ್ಟು ಘಟನಾ ಸ್ಥಳಕ್ಕೆ ಹೋಗಿ ಪುನಃ ಕರ್ತವ್ಯವನ್ನು ಮಾಡಿದೆನು.

ಸದ್ರಿ ನಮ್ಮ ಹೈವೇ ಪೆಟ್ರೋಲಿಂಗ್ ವಾಹನಕ್ಕೆ ಜಖಂ ಆಗಿತ್ತು. ಸದ್ರಿ ವಾಹನದಲ್ಲಿ ನಾನು ರಾತ್ರಿ ಪೆಟ್ರೋಲಿಂಗ್ ಮಾಡಿದೆನು. ಸದ್ರಿ ವಾಹನ ಜಖಂ ಆದ ಬಗ್ಗೆ ಫೋಟೋ ತೆಗೆದಿರುತ್ತೇವೆ ಹಾಗೂ ಸದ್ರಿ ಫೋಟೋ ಪಂಚನಾಮೆಯ ಕಾಲಕ್ಕೆ ತೆಗೆಯಲಾಗಿದೆ. ಗುಡ್ ಲಕ್ ಹೋಟೆಲ್ ಮುಂದೆ ನಮ್ಮ ವಾಹನ ಇದ್ದು ಅಲ್ಲಿಯೇ ಪಂಚನಾಮೆ ಮಾಡಲಾಗಿದೆ. ಸದ್ರಿ ಸ್ಥಳದಲ್ಲಿ 6 ಸೈಕಲ್ ಮೋಟಾರ್, 2 ಪೋಲಿಸ್ ಬೈಕ್ ಗಳು, ಒಂದು ಡಿ.ಆರ್. ವಾಹನ ಮತ್ತು ನಮ್ಮ ಪೆಟ್ರೋಲಿಂಗ್ ವಾಹನ ಇದ್ದವು. ಪಂಚನಾಮೆಯ ಕಾಲಕ್ಕೆ ಸದ್ರಿ ವಾಹನಗಳ ಫೋಟೋ ತೆಗೆಯಲಾಗಿದೆ. ಸದ್ರಿ ಫೋಟೋಗಳು ನಿ.ಪಿ. 3 ರಿಂದ 5 ಆಗಿರುತ್ತವೆ. ಸದ್ರಿ ನಿ.ಪಿ. 3 ರಿಂದ 5 ರ ಫೋಟೋದಲ್ಲಿ ನಮ್ಮ ವಾಹನ ಹಾಗೂ ಡಿ.ಆರ್. ವಾಹನ ಇರುವುದಿಲ್ಲ. ನಿ.ಪಿ. 3 ರಿಂದ 5 ರಲ್ಲಿರುವ ಫೋಟೋದಲ್ಲಿ ಕಲ್ಲು ಬಿದ್ದಿರುವ ವಾಹನಗಳನ್ನೂ ಸಹ ಫೋಟೋ ತೆಗೆದಿದ್ದಾರೆ. ಸದ್ರಿ ವಾಹನಗಳನ್ನು ನಾನು ತೋರಿಸಿರುವುದಿಲ್ಲ. ಪಂಚನಾಮೆಯನ್ನು ಕೈಬರಹದಲ್ಲಿ ಬರೆಯಲಾಗಿದೆ. ಸದ್ರಿ ಪಂಚನಾಮೆಗೆ ನಾನು ಸಹಿ ಹಾಕಿದ್ದೇನೆ. ಸದ್ರಿ ನಿ.ಪಿ. 4 ರ ಫೋಟೋವನ್ನು ಬೆಳಿಗ್ಗೆ ತೆಗೆಯಲಾಗಿದೆ.

ಸದ್ರಿ ಫೋಟೋದಲ್ಲಿ ನಮ್ಮನ್ನು ಅಂಟಿಸಿದಂತೆ ಕಾಣುವುದಿಲ್ಲ. ಪಂಚನಾಮೆಯನ್ನು ತನಿಖಾಧಿಕಾರಿಗಳು ಬರೆದಿದ್ದಾರೆ. ಗುಡ್ ಲಕ್ ಹೋಟೆಲ್ ಮುಂಭಾಗದಲ್ಲಿರುವ ಖಾಲಿ ಜಾಗವನ್ನು ಘಟನಾ ಸ್ಥಳವೆಂದು ತೋರಿಸಿದ್ದೇನೆ. ಅಲ್ಲಿರುವ ಅಂಗಡಿಯ ಮುಂದೆ ಮೋಟಾರ್ ಸೈಕಲ್ ಇದ್ದವು.

ಪಂಚನಾಮೆಯ ಕಾಲಕ್ಕೆ ಎಷ್ಟು ಜನ ಸೇರಿದ್ದರು ಎಂಬುದು ನನಗೆ ನೆನಪಿಲ್ಲ. ಚಾಸಾ 2 ಮತ್ತು 3 ರವರನ್ನು ಚಾಸಾ 43 ರವರು ಕರೆದುಕೊಂಡು ಬಂದರು. ನಾನು ಸಾರ್ವಜನಿಕರಿಂದ ಹಾಗೂ ಪೋಲಿಸ ಸಿಬ್ಬಂದಿಗಳಿಂದ ಆರೋಪಿತರ ಹೆಸರು ಮತ್ತು ವಿಳಾಸವನ್ನು ಪಡೆದು ದೂರನ್ನು ನೀಡಿದ್ದೇನೆ. ಆರೋಪಿತರ ವೈಯಕ್ತಿಕ ಪರಿಚಯ ನನಗಿರುವುದಿಲ್ಲ. ಇನ್ನುಳಿದ ಆರೋಪಿತರ ಹೆಸರು ಮತ್ತು ವಿಳಾಸವನ್ನು ತಿಳಿದುಕೊಂಡು ಮರುಹೇಳಿಕೆಯನ್ನು ನೀಡಿದ್ದೇನೆ. ನಾನು ದೂರನ್ನು ನೀಡಿದ ಮಾರನೇ ದಿನ ಮರುಹೇಳಿಕೆ ನೀಡಿದ್ದೇನೆ.

ಸ್ಥಳೀಯ ಪೋಲಿಸರು ಘಟನಾ ಸ್ಥಳದ ಸುತ್ತ ಮುತ್ತಲಿರುವ ಸಿಸಿ ಟಿವಿ ಕ್ಯಾಮೆರಾ ಫುಟೇಜನ್ನು ತೋರಿಸಿ ಸಾರ್ವಜನಿಕರಿಂದ ಮಾಹಿತಿ ಪಡೆದುಕೊಂಡು ಇನ್ನುಳಿದ ಆರೋಪಿತರ ಹೆಸರನ್ನು ನನಗೆ ತಿಳಿಸಿದ್ದಾರೆ. ಸದ್ರಿ ಫುಟೇಜನ್ನು ಚಾಸಾ 43 ರವರಿಗೆ ನೀಡಲಾಗಿದೆ. ನಾನು ಆ ದಿನ ಹೊನ್ನಾವರದಲ್ಲಿ ಕರ್ತವ್ಯ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಪೆಟ್ರೋಲಿಂಗ್ ವಾಹನ ಜಖಂ ಆಗಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಸ್.ಜಿ.ಹೆಚ್. ವಕೀಲರಿಂದಃ**

ಆ ದಿನ ತಮ್ಮ ಪ್ರಾಪರ್ಟಿಗೆ ಹಾನಿಯಾಗಿರುವ ಬಗ್ಗೆ ಸನ್ಮಾನ್ ಹೋಟೆಲ್ ನವರು ದೂರನ್ನು ನೀಡಲು ಬಂದಿದ್ದರು. ನಾನೇ ದೂರನ್ನು ವೈಯಕ್ತಿಕವಾಗಿ ನೀಡಿದ್ದೇನೆ. ನಾನು ದೂರು ನೀಡುವ ಪೂರ್ವದಲ್ಲಿ ಹೊನ್ನಾವರ ಠಾಣೆಯವರು ದೂರನ್ನು ದಾಖಲಿಸಿದ ಬಗ್ಗೆ ನಾನು ವಿಚಾರಿಸಲಿಲ್ಲ. ಬೈಕ್ ಹಾಗೂ ರಿಕ್ಷಾ ಅಪಘಾತವಾದ ಸ್ಥಳ ಹಾಗೂ ಸಮಯದ ಬಗ್ಗೆ ನಾನು ಚೌಕಾಸಿ ಮಾಡಿಲ್ಲ. ಆ ದಿನ ಹಿಂದೂ ಕೋಮಿನವರಷ್ಟೇ ಆಸ್ತಿಯನ್ನು ಲುಕ್ಸಾನು ಪಡಿಸಿದ್ದಾರೆಂದು ಹೇಳಲು ಆಗುವುದಿಲ್ಲ ಎಂದಾಗ ಸಾಕ್ಷಿಯು ಎರಡೂ ಕೋಮಿನವರು ಹಾನಿ ಮಾಡಿದ್ದಾರೆ ಎಂಬುದಾಗಿ ನುಡಿದಿದ್ದಾರೆ. ಗುಂಪಿನಲ್ಲಿ ಯಾರು ಆಸ್ತಿಯನ್ನು ಹಾನಿ ಮಾಡಿದ್ದಾರೆಂಬುದು ಹೇಳಲು ಆಗುವುದಿಲ್ಲ, ಆದರೆ ಅದು ಗುಂಪಿಗೆ ಸಂಬಂಧಪಟ್ಟಿದ್ದು.

ನಾನು ರಾಜಕೀಯ ಒತ್ತಡದಿಂದ ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಯನ್ನು ಹಾನಿ ಮಾಡಿಕೊಂಡಂತಹ ವ್ಯಕ್ತಿಗಳು ದೂರನ್ನು ದಾಖಲಿಸಬಹುದಾಗಿತ್ತು ಎಂದರೆ ಸರಿಯಲ್ಲ. ಆ ದಿನ ನಾನು ಘಟನಾ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಚಿಕಿತ್ಸೆಯನ್ನು ಬೇರೆ ಕಾರಣಕ್ಕಾಗಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚನಾಮೆಗೆ ಹಾಜರಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೃತ್ಯವನ್ನು ಎಸಗಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ನಾವೇ ಪ್ರಕರಣಕ್ಕೆ ಪೂರಕವಾಗುವಂತೆ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.